ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ1783/2013

ಚಾಸಾಃ14 ಪ್ರಾಸಾಃ10

ದಿನಾಂಕಃ 16-12-2022

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ರಮೇಶ |
| ತಂದೆಯ ಹೆಸರು | : | ನಾರಾಯಣ ಪೂಜಾರಿ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಗುಮಾಸ್ತ |
| ವಾಸ ಸ್ಥಳ | : | ಸಾಸ್ತಾನ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ</u>**

ಸಾಕ್ಷಿಗೆ ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿಃ 11-01-2013 ರಂದು ಸಾಸ್ತಾನ ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-15 ಮತ್ತು 16 ರವರು ಹಾಗೂ ಆರೋಪಿ ಪ್ರಹ್ಲಾದ್ ರವರು ಇದ್ದರು. ಪೊಲೀಸರು ಸದ್ರಿ ಸಂಘದಲ್ಲಿ ಆರೋಪಿ ಅಡವು ಇಟ್ಟ ಚಿನ್ನದ ಲಕ್ಷ್ಮೀ ಪೆಂಡೆಂಟ್ ನ್ನು ವಶಪಡಿಸಿಕೊಂಡಿರುತ್ತಾರೆ. ಮಧ್ಯಾಹ್ನ 2-30 ರಿಂದ 3-15 ರವರೆಗೆ ಪೊಲೀಸರು ಮಹಜರು ಮಾಡಿರುತ್ತಾರೆ.

ಸಾಕ್ಷಿಗೆ ಸ್ವತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ದಿಃ 01-03-2013 ರಂದು ಸಾಸ್ತಾನ

ಮೂರ್ತೆದಾರರ ಸೇವಾ ಸಹಕಾರಿ ಸಂಘದಲ್ಲಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ-15 ಮತ್ತು 16 ರವರು ಹಾಗೂ ಆರೋಪಿ ಅಭಿಷೇಕ್ ರವರು ಇದ್ದರು. ಪೊಲೀಸರು ಆರೋಪಿಯು ಅಡವು ಇಟ್ಟಿದ್ದ ರೋಪ್ ಚೈನನ್ನು ವಶಪಡಿಸಿಕೊಂಡಿರುತ್ತಾರೆ. ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ ಪೊಲೀಸರು ಮಹಜರು ಮಾಡಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ 3 ನೇ ಅರೋಪಿಯನ್ನು  ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ತುಂಬಾ ವರ್ಷಗಳಾದ ಕಾರಣ ಪೊಲೀಸರು ವಶಪಡಿಸಿಕೊಂಡ ಚಿನ್ನ ಇದೆಯೆಂದು ಗುರುತಿಸಲುಸಾಧ್ಯವಿಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

ದಿಃ 11-01-2013 ರಂದು ಪೊಲೀಸರು ಚಿನ್ನದ ಸರವನ್ನು ವಶಪಡಿಸಿಕೊಂಡಿದ್ದು, ದಿಃ 01-03-2013 ರಂದು ಲಕ್ಷ್ಮೀ ಪೆಂಡೆಂಟ್ ನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ</u>**

ನಮ್ಮ ಸಂಸ್ಥೆಯಲ್ಲಿ ಸಿ.ಸಿ ಟಿವಿ  ಆ ಸಮಯದಲ್ಲಿ ಇರಲಿಲ್ಲ. ನಮ್ಮ ಸಂಸ್ಥೆಯಲ್ಲಿ ತುಂಬಾ ಗ್ರಾಹಕರು ಬರುತ್ತಾರೆ. ನಮ್ಮ ಸಂಸ್ಥೆಗೆ ಬರುವ ಗ್ರಾಹಕರ ಮುಖ ಪರಿಚಯ ಇಟ್ಟು ಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಸದ್ರಿ ಸಂಸ್ಥೆಯಲ್ಲಿ ಗುಮಾಸ್ತನಾಗಿರುತ್ತೇನೆ. ಚಾಸಾ-15 ರವರು ಸದ್ರಿ ಸಂಸ್ಥೆಯಲ್ಲಿ ಶಾಖಾಧಿಕಾರಿಯಾಗಿರುತ್ತಾರೆ. ಆಭರಣಗಳನ್ನು ಸಾಲ ಕೊಡುವ ವ್ಯವಹಾರವನ್ನು ಚಾಸಾ-15 ರವರು ಮಾಡುತ್ತಾರೆ. ಆಭರಣಗಳ ಮೇಲೆ ಸಾಲ ಕೊಡುವುದನ್ನು ನಿರ್ಧರಿಸುವುದು ಚಾಸಾ-15 ರವರು ಎಂದರೆ ಸರಿ. ಈ ಪ್ರಕರಣದಲ್ಲಿ ಅಡವು ಇಟ್ಟ ಚಿನ್ನಗಳಿಗೆ ಸಂಬಂಧಿಸಿದ ದಾಖಲೆಗೆ ನಾನು ಸಹಿ ಮಾಡಿರುವುದಿಲ್ಲ. ಚಿನ್ನವನ್ನು ಯಾವಾಗ ಅಡಮಾನ ಮಾಡಿದ್ದರು, ಏನು ಮಾತುಕತೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಅಡಮಾನ ಮಾಡುವ ಸಮಯದಲ್ಲಿ ಚಿನ್ನದ ತೂಕ, ವಿನ್ಯಾಸ ಮತ್ತು ಅದರ ಪರಿಶುದ್ದತೆಯ ಬಗ್ಗೆ ದಾಖಲಾತಿಗಳಲ್ಲಿ ಕಾಣಿಸಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

ಆಭರಣಗಳ ಮಾಲೀಕರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಆ ಸಂಸ್ಥೆಯಲ್ಲಿ ಉದ್ಯೋಗಿಯಾಗಿರುವುದರಿಂದ ನನ್ನ ಕೆಲಸ ಹೊರತುಪಡಿಸಿ ಬೇರೆ ವಿಚಾರ ಗಮನಿಸುವುದಿಲ್ಲ ಎಂದರೆ ಸರಿ. ನಾನು 2 ದಾಖಲೆಗಳಿಗೆ ಸಹಿ ಮಾಡಿರುತ್ತೇನೆ, ಅದರಲ್ಲಿ ಏನು ಬರೆದಿದೆ

ಎಂದು ಗೊತ್ತಿಲ್ಲ. ಆಭರಣಗಳಿಗೆ ಸಂಬಂಧಿಸಿದಂತೆ ಏನೆಲ್ಲಾ ವ್ಯವಹಾರ ಆಗಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಸದ್ರಿ ಸಂಸ್ಥೆಯಲ್ಲಿ ಕುಳಿತುಕೊಳ್ಳಲು ಪ್ರತ್ಯೇಕವಾದ ಆಸನವಿದೆ. ನನಗೆ ಸದ್ರಿ ಸಂಸ್ಥೆಯಲ್ಲಿ ಗುಮಸ್ತನಾಗಿ ಸಾಕಷ್ಟು ಕೆಲಸವಿರುತ್ತದೆ ಎಂದರೆ ಸರಿ. ನಾನು ನನ್ನ ಆಸನದಲ್ಲಿ ಕುಳಿತಿದ್ದು, ಬೇರೆ ಯಾವುದೇ ಕಾರ್ಯಚರಣೆಯಲ್ಲಿ ಭಾಗವಹಿಸಿರಲಿಲ್ಲ ಎಂದರೆ ಸರಿ. ಪೊಲೀಸರು ಎಷ್ಟು ಜನ ಬಂದಿದ್ದರು ಎಂದು ಗೊತ್ತಿಲ್ಲ. ಪೊಲೀಸರು ನಮ್ಮ ಸಂಸ್ಥೆಯಲ್ಲಿ ಯಾವುದಾದರೂ ದಾಖಲೆ ವಶಪಡಿಸಿಕೊಂಡಿದ್ದಾರಾ ಎಂದರೆ ನನಗೆ ಗೊತ್ತಿಲ್ಲ.

ನಮ್ಮ ಸಂಸ್ಥೆಯಲ್ಲಿ ಚಿನ್ನಗಳನ್ನು ಚಾಸಾ-15 ರವರು ಲಾಕರ್ ನಲ್ಲಿ ಇಡುತ್ತಾರೆ. ಈ ಪ್ರಕರಣದಲ್ಲಿ ಹಾಕಿದ 2 ಸಹಿಗಳನ್ನು ಏಕ ಕಾಲದಲ್ಲಿ ಹಾಕಿರುತ್ತೇನೆ. ಪೊಲೀಸರು ಸಾಕ್ಷಿಯಾಗಿ ಸಹಿ ಹಾಕಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪ್ರಹ್ಲಾದ್, ಅಭಿಷೇಕರವರು ನನಗೆ ಪರಿಚತರಲ್ಲ. ನಾನು ನಿಪಿ-10 ಮತ್ತು 11 ರ ದಾಖಲೆಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಒಡವೆಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**